ಮೂಲ ದಾವಾ ನಂಃ 98/2018

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **29-11-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಂ.ಜೆ ವಕೀಲರಿಂದಃ**

ನಾನು ಈ ಮೊದಲು 1 ನೇ ಪ್ರತಿವಾದಿ ಹಾಗೂ ಅವರ ತಂದೆಯ ವಿರುದ್ಧ ಮೂಲ ದಾವಾ ಸಂಖ್ಯೆ 75/2012 ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾವಾ ಸಂಖ್ಯೆ 75/2012 ರ ವಾದ ಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಆ ದಾವೆಗೆ ಪ್ರತಿವಾದಿಯರು ಸಲ್ಲಿಸಿದ ಉಹಾಹರಣೆಯನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ಸಾಕ್ಷಿಯು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯ ಪ್ರಮಾಣ ಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ಹಾಜರುಪಡಿಸಿದ್ದ ನಿಪಿ 1 ರಿಂದ ನಿಪಿ 3 ರ ದಾಖಲೆಗಳನ್ನು ತೋರಿಸಿದಾಗ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 4 ರಿಂದ ನಿಡಿ 6 ಎಂದು ಗುರುತಿಸಲಾಯಿತು. ಸದರಿ ದಾವೆಯ ತೀರ್ಪಿನ ಮತ್ತು ಡಿಕ್ರಿಯ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದಾಗ ಅವುಗಳನ್ನು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 7 ಮತ್ತು ನಿಡಿ 8 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ಹಾಜರುಪಡಿಸಿದ್ದ ನಕಾಶೆ ಮತ್ತು ನೋಟಿಸ್ಸಿನ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದಾಗ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಡಿ 9 ಮತ್ತು ನಿಡಿ 10 ಎಂದು ಗುರುತಿಸಲಾಯಿತು. ಹದ್ದುಬಸ್ತು ಸರ್ವೇಗಾಗಿ ಸಲ್ಲಿಸಿದ ಅರ್ಜಿಯನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 11 ಎಂದು ಗುರುತಿಸಲಾಯಿತು.

ಪ್ರಸ್ತುತ ದಾವೆಯಲ್ಲಿ ನ್ಯಾಯಾಲಯದಿಂದ ಬಂದ ವಾದ ಪತ್ರವನ್ನು ಹಾಜರುಪಡಿಸಿದ್ದು , ಅದನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 12 ಎಂದು ಗುರುತಿಸಲಾಯಿತು. ಈ ಹಿಂದೆ 1 ನೇ ಪ್ರತಿವಾದಿಯ ತಂದೆ ನನ್ನ ವಿರುದ್ಧ ಮೂಲ ದಾವಾ ಸಂಖ್ಯೆ 97/2012 ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯ ವಾದ ಪತ್ರವನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 13 ಎಂದು ಗುರುತಿಸಲಾಯಿತು. ಸದರಿ ದಾವೆಗೆ ನಮ್ಮ ವಕೀಲರ ಮೂಲಕ ನಾನು ತಕರಾರನ್ನು ಸಲ್ಲಿಸಿದ್ದು ಅದರ ಪ್ರತಿಯನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 14 ಎಂದು ಗುರುತಿಸಲಾಯಿತು. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದಾಗ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 15 ಮತ್ತು ನಿಡಿ 16 ಎಂದು ಗುರುತಿಸಲಾಯಿತು.

ಸರ್ವೇ ನಂಬರ್ 405 ಅ 1 ಕ್ಷೇತ್ರವು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಸ್ಥಳ ಎಂದರೆ ಸರಿ. ಸದರಿ ಸ್ಥಳಕ್ಕೆ ಲಗ್ತತವಾಗಿ ಸರ್ವೇ ನಂಬರ್ 458 ಹಿಸ್ಸಾ 2 ಇದೆ ಎಂದರೆ ಸರಿ. ಸರ್ವೇ ನಂಬರ್ 405 ಅ 1 ಕ್ಷೇತ್ರವು ಪೂರ್ವದಿಂದ ಪಶ್ಚಿಮಕ್ಕೆ ಇಳಿಜಾರು ಆಗಿದೆ ಎಂದರೆ ಸರಿ. ಆದ್ದರಿಂದ ಸ್ವಾಭಾವಿಕವಾಗಿ ಮಳೆ ಬಂದಾಗ ಸರ್ವೇ ನಂಬರ್ 405 ಅ 1 ರ ಕ್ಷೇತ್ರದ ಮಳೆ ನೀರು ಸರ್ವೇ ನಂಬರ್ 458 ಹಿಸ್ಸಾ 2 ರಲ್ಲಿ ಹರಿದು ಹೋಗುತ್ತದೆ ಎಂದರೆ ಸರಿ. ಸರ್ವೇ

ನಂಬರ್ 458 ಹಿಸ್ಸಾ 2 ರ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಹಳ್ಳ ಇದೆ ಎಂದರೆ ಸರಿಯಲ್ಲ. ನಮ್ಮ ಸ್ಥಳಕ್ಕೆ ಹೊಂದಿಕೊಂಡು ಹಳ್ಳ ಮುಂದೆ ಹೋಗುತ್ತದೆ ಎಂದರೆ ಸರಿ.

ಸಾಕ್ಷಿಗೆ ಮೂಲ ದಾವಾ ಸಂಖ್ಯೆ 97/2012 ರಲ್ಲಿನ ತನ್ನ ಸಾಕ್ಷ್ಯದ ಪ್ರಮಾಣ ಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ 17 ಎಂದು ಗುರುತಿಸಲಾಯಿತು. ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯೇ ನಮಗೆ ತೊಂದರೆ ನೀಡುತ್ತಾ ಬಂದಿದ್ದಾರೆ. 1 ನೇ ಪ್ರತಿವಾದಿಯು ನಮ್ಮ ಜಾಗಕ್ಕೆ ಬಂದು ನಮ್ಮ ಜಾಗವನ್ನು ಅತಿಕ್ರಮಣ ಮಾಡುವುದಾಗಿ ಹೇಳಿದ್ದಾರೆ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಗೆ ಯಾವುದೇ ಹೇತು ಉಂಟಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.